ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ

ಚನ್ನಪಟ್ಟಣ.

CC No. 123/2016

CW-1 PW-1

| | |
|---|---|
| ಹೆಸರು | ಃ ಜನಾರ್ಧನ ಪಿ |
| ಗಂಡನ ಹೆಸರು/ತಂದೆಯ ಹೆಸರು | ಃ ಪುಟ್ಟಸ್ವಾಮಿ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಆಟೋ ಚಾಲಕ |
| ವಾಸ | ಃ ಗುಡ್ಡೆ ತಿಮ್ಮಸಂದ್ರ ಗ್ರಾಮ |

**ದಿನಾಂಕ 22.11.2022 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ನನಗೆ ಆರೋಪಿತರು ಗೊತ್ತು. ದಿಃ12.02.2016 ರಂದು ನಾನು ರಾತ್ರಿ 8.30 ರ ಸಮಯದಲ್ಲಿ ಹುಚ್ಚಮ್ಮನ ದೇವಸ್ಥಾನದ ಹತ್ತಿರ ನಾನು,ಚಾಸಾ2 ರಿಂದ ಚಾಸಾ-4 ರವರುಗಳು ಹಾಗೂ ಇತತರು ಕಾಂಗ್ರೆಸ್ ಪಕ್ಷದ ಪರವಾಗಿ ಮತ ಕೇಳಲು ಪ್ರಚಾರ ಮಾಡಲು ಹೋಗುತ್ತಿದ್ದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಹಾಗೂ 2 ನೇ ಆರೋಪಿ ಗುಂಪು ಕಟ್ಟಿಕೊಂಡು ನಿಂತಿದ್ದು, ನೀವು ಏನು ಕೆಲಸ ಮಾಡಿದ್ದೀರಾ ಕಾಂಗ್ರೆಸ್ ಪರ ಓಟು ಕೇಳಲು ನಮ್ಮನ್ನು ಕೆಟ್ಟದಾಗಿ ಬೈಯುತ್ತಿದ್ದರು, ನಾನು ಏಕೆ ಬೈಯುತ್ತಿದ್ದೀರಾ ಎಂದು ಆರೋಪಿತರನ್ನು ಕೇಳಿದಾಗ 1 ನೇ ಆರೋಪಿ ನನ್ನ ಮುಖದ ಮೇಲೆ ಕೈಯಿಂದ ಹೊಡೆದು, 2 ಮತ್ತು 3 ನೇ ಆರೋಪಿತರು ಇಟ್ಟಿಗೆ ಚೂರಿನಿಂದ ನನ್ನ ಮುಖದ ಮೇಲೆ ಹೊಡೆದರು. 3 ಮತ್ತು 4 ನೇ ಆರೋಪಿತರು ಹಾಗೂ 5 ನೇ

ಆರೋಪಿ ನನ್ನನ್ನು ಕೆಳಕ್ಕೆ ಎಳೆದುಕೊಂಡು ನನಗೆ ರಕ್ತ ಬರುವ ಹಾಗೆ ಕೈಯಿಂದ ಹೊಡೆದು, ಕಾಲಿನಿಂದ ತುಳಿದರು. ನಮ್ಮ ಗುಂಪಿನಲ್ಲಿದ್ದವರು ನನ್ನನ್ನು ಬಿಡಿಸಿಕೊಂಡು ಹೋಗಿ ನನ್ನನ್ನು ಮನೆಗೆ ಬಿಟ್ಟರು. ಅದೇ ದಿನ ರಾತ್ರಿ ಸುಮಾರು 11.00 ಗಂಟೆಯ ನಂತರ ನಾನು ಠಾಣೆಗೆ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ದೂರಾದ ಕಾರಣ ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ದಿನ ರಾತ್ರಿ ದೂರು ನೀಡಿದ ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಮಾರನೆ ದಿನ ದಿಃ13.02.2016 ರಂದು ಬೆಳಗ್ಗೆ 11.00 ಗಂಟೆಗೆ ಪೋಲಿಸರು ಬಂದು ನಾನು ಆ ದಿನ ಊರಿನಲ್ಲಿದ್ದು ನಾನೇ ಜಾಗವನ್ನು ತೋರಿಸಿದ ಮೇರೆಗೆ ಮಹಜರನ್ನು ಜರುಗಿಸಿದರು. ಮಹಜರ್ ಸಮಯದಲ್ಲಿ ಇಟ್ಟಿಗೆಯನ್ನು ಪೋಲಿಸರು ತೆಗೆದುಕೊಂಡಿರುತ್ತಾರೆ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಪಂಚನಾಮೆ ಆದ ಕಾರಣ ಅದನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಇಟ್ಟಿಗೆ ಚೂರನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**<u>ಪಾಟೀ ಸವಾಲುಃ ಎಪಿಪಿಯವರಿಂದಃ</u>**

ಆರೋಪಿತರು ನಿನ್ನನ್ನು ಸಾಯಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಸದರಿ ದಿನ ಚುನಾವಣಾ ಪ್ರಚಾರಕ್ಕೆ ಹೋಗುವಾಗ ನನ್ನ ಜೊತೆ 4-5 ಜನ ಇದ್ದೆವು. ನಾನು ಒಂದು ಪಕ್ಷ ಮತ್ತು ಆರೋಪಿತರು ಒಂದು ಪಕ್ಷ ಎಂದರೆ ಹೌದು.

ನಾನು ಚುನಾವಣೆ ಬಂದಾಗ ತುಂಬಾ ವ್ಯಯಕ್ತಿಕವಾಗಿ ತೆಗೆದುಕೊಂಡು ಪ್ರಚಾರ ಮಾಡುತ್ತೇನೆ ಎಂದರೆ ಹಾಗೇನಿಲ್ಲ ಪಕ್ಷದ ಪರವಾಗಿ ಪ್ರಚಾರ ಮಾಡುತ್ತೇನೆ. ಗಲಾಟೆಯಾದ ನಂತರ ಇಂದಿನವರೆಗೆ ನನ್ನ ಮತ್ತು ಆರೋಪಿತರ ನಡುವೆ ಬೇರೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಹೌದು. ದೂರು ನೀಡಿದಾಗ ರಾತ್ರಿ ಸುಮಾರು 11.00 ಗಂಟೆ ಸಮಯವಾಗಿತ್ತು. ಘಟನೆ ನಡೆದ ಸ್ಥಳದಿಂದ ಪೋಲಿಸ್ ಠಾಣೆಗೆ 5-6 ಕಿಲೋ ಮೀಟರ್ ಅಂತರವಿತ್ತು ಎಂದರೆ ಸರಿ. ಗಲಾಟೆಯಾದ ನಂತರ ನನಗೆ ರಕ್ತ ಬಂದಿದ್ದರಿಂದ ನಾನು ಮನೆಗೆ ಹೋಗಿ ಸುಧಾರಿಸಿಕೊಂಡು ನಂತರ ದೂರನ್ನು ನೀಡಲು ಹೋಗಿರುತ್ತೇನೆ. ಘಟನೆ ನಡೆದಾಗ ನನ್ನ ಬಟ್ಟೆಗೆ ರಕ್ತ ತಾಗಿರಲಿಲ್ಲ. ಆ ರೀತಿ ಗಲಾಟೆಯಾಗಿದ್ದರೆ ಗಲಾಟೆಯಾದ ತಕ್ಷಣ ಪೋಲಿಸ್ ಠಾಣೆಗೆ ಹೋಗಿ ದೂರು ನೀಡುತ್ತಿದ್ದೆ ಎಂದರೆ ಸಾಕ್ಷಿ ಮನೆಗೆ ಹೋಗಿ ಸುಧಾರಿಸಿಕೊಂಡು ದೂರು ನೀಡಿರುತ್ತೇನೆ. ಪೋಲಿಸರು ಜರುಗಿಸಿದ ಮಹಜರಿಗೆ ತಿಮ್ಮರಾಜು, ಶ್ರೀನಿವಾಸ್ ರವರುಗಳು ಸಹಿಗಳನ್ನು ಮಾಡಿರುತ್ತಾರೆ. ಆರೋಪಿತರಿಗೂ ಮತ್ತು ನನಗೂ ಯಾವುದೇ ಗಲಾಟೆಯಾಗಿಲ್ಲ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ನ್ನು ನಾನೇ ಈ ಕೇಸಿಗೋಸ್ಕರ ಪೋಲಿಸರಿಗೆ ಸೃಷ್ಟಿ ಮಾಡಿಕೊಂಡು ಕೊಟ್ಟಿರುತ್ತೇನೆ ಎಂದರೆ ಆರೋಪಿತರು ಅದರಿಂದಲೇ ಹೊಡೆದಿದ್ದು ನನಗೆ ನೆನಪಿದೆ ಎಂದು ನುಡಿಯುತ್ತಾರೆ. ಆರೋಪಿತರು ನನಗೆ ಬೆದರಿಕೆ ಹಾಕಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಕ್ಷದ ಬಗ್ಗೆ ಕಾಳಜಿ ಇಟ್ಟುಕೊಂಡು ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಈ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದದಿಂದ ಬೈದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಓ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.